13

ಕರ್ನಾಟಕ ಲೋಕಾಯುಕ್ತ

100

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.3648/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 08.03.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ (1) ಶ್ರೀ ಸಿದ್ದೇಶ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚೋಳೂರು ಗ್ರಾಮ ಪಂಚಾಯತಿ, ಗುಬ್ಬಿ ತಾಲ್ಲೂಕು ಹಾಗೂ (2) ಶ್ರೀ ಶಿವಪ್ರಸನ್ನ, ವಸತಿ ಸಮನ್ವಯಾಧಿಕಾರಿ, ಕೊರಟಗೆರೆ ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ, ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ ಸುಬ್ರಮಣ್ಯ ಸ್ವಾಮಿ.ಡಿ.ಎನ್. ದೊಗ್ಗನಹಳ್ಳಿಯ ನಿವಾಸಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಸಿದ್ದೇಶ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚೋಳೂರು ಗ್ರಾಮ ಪಂಚಾಯತಿ, ಗುಬ್ಬಿ ತಾಲ್ಲೂಕು ಹಾಗೂ (2) ಶ್ರೀ ಶಿವಪ್ರಸನ್ನ, ವಸತಿ ಸಮನ್ವಯಾಧಿಕಾರಿ, ಕೊರಟಗೆರೆ ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **<u>ದೂರಿನ ಸಂಕ್ಷಿಪ್ತ ವಿವರಣೆ:-</u>** ದೂರುದಾರರು ತಮ್ಮ ದೂರಿನಲ್ಲಿ ಈ ಕೆಳಗಿನಂತೆ ಆಪಾದಿಸಿರುತ್ತಾರೆ.

1) ಕೊರಟಗೆರೆ ತಾಲ್ಲೂಕು, ಸಿ.ಎನ್.ದುರ್ಗ ಹೋಬಳಿ, ದೊಗ್ಗನಹಳ್ಳಿ ಗ್ರಾಮದ, ಶ್ರೀಮತಿ ಮೀನಾಕ್ಷಿ ಅವರಿಗೆ ಎದುರುದಾರರು ಹಳೆ ದನದ ಷೆಡ್‌ನ್ನು ದಿ.10.9.2014ರಂದು ಖಾತೆ ನಂ.240 ವಿಸ್ತೀರ್ಣ 15 x 20 ಅಡಿ ಎಂದು ನಮೂದಿಸಿ ಯಾವುದೇ ಸ್ಕೆಚ್ ಇಲ್ಲದೆ ಸರ್ವೆ ನಂಬರಿನ ಜಮೀನಿನಲ್ಲಿ ಖಾತೆ ಮಾಡಿರುತ್ತಾರೆ.

2) ದಿ.28.12.2012ರಂದು, ಕೊರಟಗೆರೆ ತಾಲ್ಲೂಕು ಪಂಚಾಯತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ 2ನೇ ಎದುರುದಾರರು ಹಳೆದನದ ಷೆಡ್

3

14 101

ಅನ್ನು ಟಿ.ಪಿ. ಅಪೀಲ್ ನಂ.2719028 ದಿ.20.3.2014ರಂದು 34,500/-ಗಳ ಬಿಲ್ ಮಾಡಿರುತ್ತಾರೆ.

3) ಬೂದಗವಿ ಗ್ರಾಮಪಂಚಾಯತಿಯ ಅಧಿಕಾರಿಗಳು ಯಾವುದೇ ಮಾಹಿತಿ ಕೇಳಿದರೂ ಸರಿಯಾಗಿ ಉತ್ತರಿಸುವುದಿಲ್ಲ.

4) ಪಂಚಾಯತಿಯವರಿಗೆ ವಿಧಿಸಿರುವ ಷರತ್ತಿನ ಪ್ರಕಾರ ಲೈಸೆನ್ಸ್ ಕೊಟ್ಟು 6 ತಿಂಗಳ ನಂತರ ರಿನೀವಲ್ ಮಾಡಿರುವುದಿಲ್ಲ,

5) ಯಾವುದೋ ಕಟ್ಟಡಕ್ಕೆ ವಿ.15 x 20 ಅಡಿ ವಿಸ್ತೀರ್ಣ ಎಂದು ನಮೂದಿಸಿ ಅದಕ್ಕಿಂತ ಜಾಸ್ತಿ ವಿಸ್ತೀರ್ಣಕ್ಕೆ ಲೈಸೆನ್ಸ್ ನೀಡಿ ಬಸವ ವಸತಿ ಯೋಜನೆಯಡಿಯಲ್ಲಿ ಮಂಜೂರುಮಾಡಿ, ರಾಜೀವ್ ಗಾಂಧಿ ಯೋಜನೆಯಡಿಯಲ್ಲಿ ಬಿಲ್ ಮಾಡಿರುತ್ತಾರೆ.

3. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

4. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ಬೆಂಗಳೂರು ಇವರ ಆದೇಶ ಸಂ.ವಇ 55 ಹೆಚ್ಎಎಸ್ 2011 ದಿ:301.2012ರ ಸರ್ಕಾರದ ಆದೇಶದಂತೆ ಸರ್ವೆ ನಂ.63/1 ಮತ್ತು 63/2 ಅವರ ಸ್ವಾಧೀನ ಅನುಭವದಲ್ಲಿರುವ ಜಮೀನಿನಲ್ಲಿ ನಿವೇಶನವನ್ನು ಖಾತೆ ಮಾಡಿ ದಿ.13.9.2012ರಂದು ನಂಬರ್ 2411ರಂತೆ ಉಪನೋಂದಣಾಧಿಕಾರಿಗಳಲ್ಲಿ ನೋಂದಣಿ ಮಾಡಿಸಿ ವಸತಿ ಕಲ್ಪಿಸಲಾಗಿದೆ. ಈ ಜಮೀನು ಮೀನಾಕ್ಷಿಯವರ ಗಂಡ ಶ್ರೀ ಲಕ್ಷ್ಮೀಕಾಂತ್ ಅವರ ಸ್ವಂತ ಜಮೀನಾಗಿದ್ದು, ವಂಶವೃಕ್ಷದ ಪ್ರಕಾರ ಖಾತೆ ಮಾಡಲಾಗಿರುತ್ತದೆ. ಅವರಿಗೆ ಮನೆ ಮಂಜೂರಾಗಿದ್ದು, ಆದರೆ ಅದನ್ನು ನಿರ್ಮಿಸಲು ನಿವೇಶನ ಇಲ್ಲದ ಕಾರಣ ಅವರ ಜಮೀನಿನಲ್ಲಿ ನಿವೇಶನ ಮಾಡಿ ಖಾತೆ ಮಾಡಲಾಗಿರುತ್ತದೆ. 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿ ಮನೆ ಮಂಜೂರುಮಾಡಿಸಿಕೊಂಡು ನಿರ್ಮಿಸಿರುವ ಮನೆಯು ಸರ್ವೆ ನಂ. 63/2ರಲ್ಲಿದ್ದು, ಇದು ಮೀನಾಕ್ಷಿಯವರ ಮಾವನವರ ಹೆಸರಿನಲ್ಲಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 2010-11ನೇ ಸಾಲಿನ ದೊಗ್ಗನಹಳ್ಳಿ ಗ್ರಾಮಕ್ಕೆ 33 ಮನೆಗಳು ಮಂಜೂರಾಗಿದ್ದು, ಮನೆಗಳನ್ನು ಕಟ್ಟ ಕಾಲಕಾಲಕ್ಕೆ ಜಿ.ಪಿ.ಎಸ್. ಆಧಾರದ ಮೇಲೆ

ಅನುದಾನ ಬಿಡುಗಡೆ ಮಾಡಲಾಗುತ್ತದೆ. ತಾನು ಜಿ.ಪಿ.ಎಸ್. ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತೇನೆ. ಶ್ರೀಮತಿ ಮೀನಾಕ್ಷಿ ಫಲಾನುಭವಿ ಸಂಕೇತ ಸಂ.199446, ಇವರ ಮನೆಯು ಪ್ರಗತಿಯಲ್ಲಿದ್ದುದ್ದರಿಂದ 4.6.2012ರಂದು ಪಾಯ ಹಂತದ ಮತ್ತು 27.12.2012ರಂದು ಲಿಂಟಲ್ ಹಂತದ ಜಿ.ಪಿ.ಎಸ್ ಮಾಡಲಾಗಿದ್ದು, ಈ ದೂರಿನಲ್ಲಿ ತಿಳಿಸಿರುವ ತಕರಾರಿನ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ. ದಿ.29.12.2012ರಂದು ದೂರುದಾರರು ತಕರಾರು ಸಲ್ಲಿಸಿದ ನಂತರ ಜಿಪಿಎಸ್ ಮಾಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನುಮುಕ್ತಾಯಗೊಳಿಸುವಂತೆ ಕೋರಿದ್ದಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

7. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಶ್ರೀಮತಿ ಮೀನಾಕ್ಷಿ ಅವರಿಗೆ ರಾಜೀವ್ ಗಾಂಧಿ ವಸತಿ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಳ್ಳಲು ಹಣ ಮಂಜೂರಾಗಿದ್ದು, ಆದರೆ ಅವರಿಗೆ ನಿವೇಶನ ಇಲ್ಲದ ಕಾರಣ ಅವರ ಮಾವ ಶ್ರೀ ಡಿ.ವಿ.ತಿಮ್ಮಪ್ಪ ಅವರ ಹೆಸರಿನಲ್ಲಿರುವ ಸರ್ವೆ ನಂ.63/2ರಲ್ಲಿ ನಿವೇಶನ ಮಾಡಿ ಖಾತೆ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ದೂರುದಾರರ ಪ್ರಕಾರ ಇಂತಹ ಕಂದಾಯ ಜಮೀನಿನಲ್ಲಿ ನಿವೇಶನ ಮಾಡಿ ಖಾತೆ ಮಾಡಲು ನಿಯಮದಲ್ಲಿ ಅವಕಾಶವಿಲ್ಲವೆಂದು ತಿಳಿಸಿರುತ್ತಾರೆ.

8. 1ನೇ ಎದುರುದಾರರ ಪ್ರಕಾರ ಕಂದಾಯ ಜಮೀನಿನಲ್ಲಿ ನಿವೇಶನ ಮಾಡಿ ಖಾತೆ ಮಾಡಲಾಗಿದೆಯೆಂದು ತಿಳಿಸಿರುವುದರಿಂದ ಕಾನೂನು ಪ್ರಕಾರ ಕಂದಾಯ ಜಮೀನನ್ನು ಭೂಪರಿವರ್ತಿಸಿ ಅದಕ್ಕೆ ಸ್ಕೆಚ್, ನೀಲನಕ್ಷೆ ತಯಾರಿಸಿ, ನಿಗದಿತ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಿದ ನಂತರ ಮಾತ್ರ ನಿವೇಶನವಾಗಿ ಪರಿವರ್ತಿಸಿ ಖಾತೆ ಮಾಡಲು ಬರುತ್ತದೆ. ಈ ಎಲ್ಲಾ ವಿಷಯ 1ನೇ ಎದುರುದಾರರ ದಿನನಿತ್ಯದ ಕಛೇರಿಯ ಕೆಲಸದಲ್ಲಿ ತಿಳಿದಿದ್ದು, ಆದಾಗ್ಯೂ ಕೂಡ ಅವರು ಈ ಯಾವುದೇ ದಾಖಲೆಗಳಿಲ್ಲದೆ ಕಂದಾಯ ಜಮೀನಿನಲ್ಲಿ ಶ್ರೀಮತಿ ಮೀನಾಕ್ಷಿ ಅವರಿಗೆ ಖಾತೆ ಮಾಡಿಕೊಟ್ಟಿರುವುದು ಕಾನೂನುಬಾಹಿರವಾಗಿರುತ್ತದೆ.

9. ಶ್ರೀಮತಿ ಮೀನಾಕ್ಷಿ ಅವರಿಗೆ ಮನೆ ಕಟ್ಟಿಕೊಳ್ಳಲು ರಾಜೀವ್ ಗಾಂಧಿ ವಸತಿ ಯೋಜನೆಯಿಂದ ಹಣ ಮಂಜೂರಾಗಿದ್ದು, ಅದನ್ನು ಈ ಕಂದಾಯ ಜಮೀನಿನ ನಿವೇಶನಕ್ಕೆ ಪಡೆದು 2ನೇ ಎದುರುದಾರರು ಜಿಪಿಎಸ್ ಮೂಲಕ ಪರಿಶೀಲಿಸಿ ಹಣ ಬಿಡುಗಡೆಗೆ ಶಿಫಾರಸ್ಸು ಮಾಡಿರುವುದು ಕಂಡುಬರುತ್ತದೆ. 2ನೇ ಎದುರುದಾರರು ಸಹ ಜಿಪಿಎಸ್ ಮಾಡುವ ವೇಳೆಯಲ್ಲಿ ಈ ಕಂದಾಯ ನಿವೇಶನದ ಮಾನ್ಯತೆ ಬಗ್ಗೆ ಪರಿಶೀಲಿಸದೇ ಹಣ ಬಿಡುಗಡೆ ಮಾಡಿದ್ದು ಕಂಡುಬರುತ್ತದೆ.

10. ದೂರುದಾರರ ಆಪಾದನೆಗಳ ಪ್ರಕಾರ ಎದುರುದಾರರು ಗ್ರಾಮಪಂಚಾಯತಿಯ ದಾಖಲೆಗಳನ್ನು ಕೇಳಿದಾಗ ಸರಿಯಾಗಿ ನೀಡದೇ ಇರುವುದು, ಕಡಿಮೆ ವಿಸ್ತೀರ್ಣ ಇರುವ ನಿವೇಶನಕ್ಕೆ ಹೆಚ್ಚು ವಿಸ್ತೀರ್ಣದಲ್ಲಿ ಮನೆ ಕಟ್ಟಲು ಲೈಸೆನ್ಸ್ ನೀಡುವುದು, ಮಾಡುತ್ತಿದ್ದಾರೆಂದು ತಿಳಿಸಿದ್ದಾರೆ. ದೂರುದಾರರ ಪ್ರತ್ಯುತ್ತರದಲ್ಲಿ ತಿಳಿಸಿರುವಂತೆ ಶ್ರೀಮತಿ ಮೀನಾಕ್ಷಿ ಅವರ ಕುಟುಂಬಕ್ಕೆ ಸರ್ವೆ ನಂ.84/3, 84/5, 16/1, 16/6, 31/3, 31/4, 32/2, 33/2, 63/1, 63/2, ಮತ್ತು ಗೌರಿಕಲ್ಲು ಸರ್ವೆ ನಂ.21, 45, ಇಷ್ಟು ಜಮೀನುಗಳ ಇದ್ದು ( ಇವುಗಳ ಪಹಣಿ ಪತ್ರಿಕೆಗಳು ಲಭ್ಯವಿರುತ್ತವೆ), ಅವರು ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಲು ಅರ್ಹರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಸತಿ ಯೋಜನೆಯಡಿ ಮನೆ ಪಡೆಯಬೇಕಾದರೆ ಆ ವ್ಯಕ್ತಿಯು ಯಾವುದೇ ಜಮೀನು ಹೊಂದಿರತಕ್ಕದ್ದಲ್ಲ. ಆದರೆ ಮೀನಾಕ್ಷಿ ಅವರ ಕುಟುಂಬವು ಮೇಲ್ಕಾಣಿಸಿದ ಜಮೀನು ಹೊಂದಿರುವುದರಿಂದ ಅವರು ಇದರ ಫಲಾನುಭವಿಯಾಗಲು ಅನರ್ಹರಾಗಿರುವುದು ಕಂಡುಬರುತ್ತದೆ. ಎದುರುದಾರರ ಈ ಎಲ್ಲಾ ಕ್ರಮಗಳು ಕಾನೂನುಬಾಹಿರವಾಗಿದ್ದು, ಅವರು ಕರ್ತವ್ಯಲೋಪವೆಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದೂ, ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಕಾಯ್ದುಕೊಳ್ಳುವಲ್ಲಿ ವಿಫಲರಾಗಿ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ

17 104

3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ. 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಬೇಕೆಂದೂ ಕೋರಿದೆ.

13. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ವರದಿಯನ್ನು ಈ ವರದಿ ಸ್ವೀಕರಿಸಿದ ಮೂರು ತಿಂಗಳೊಳಗೆ ಸಲ್ಲಿಸುವುದು.

Sd/- 9.3.17

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

8/3



5